ದೊರೆತಿದೆ. ಈ ಉದ್ದೇಶಿಸಿದ ಉಪ ವಿದ್ಯುತ್ ಕೇಂದ್ರಕ್ಕೆ ಆಗತ್ಯವಿರುವ ಜಮೀನನ್ನು ಮಂಡ್ಯ ತಾಲ್ಲೂಕಿನ ತಹಶೀಲ್ದಾರ್‌ರವರು ಮಂಜೂರು ಮಾಡಬೇಕಾಗಿದೆ. ಸದರೀ ಉಪ ವಿದ್ಯುತ್ ಕೇಂದ್ರದ ನಿರ್ಮಾಣ ಕಾರ್ಯವನ್ನು ಕೊಪ್ಪ ಉಪ ವಿದ್ಯುತ್ ಕೇಂದ್ರದ ನಿರ್ಮಾಣ ಪೂರ್ಣಗೊಳಿಸಿದ ನಂತರ ತೆಗೆದುಕೊಳ್ಳಲಾಗುವುದು ಮತ್ತು ಆದಷ್ಟು ಜಾಗ್ರತೆ ಪೂರ್ಣಗೊಳಿಸಲು ಎಲ್ಲಾ ಪ್ರಯತ್ನ ಮಾಡಲಾಗುವುದು. ನಾಗಮಂಗಲ ತಾಲ್ಲೂಕಿನ ಬಿ.ಜಿ. ನಗರದಲ್ಲಿ ಮಂಡಳಿಯು ಒಂದು 66:11 ಕೆ.ವಿ. ಉಪ ವಿದ್ಯುತ್ ಕೇಂದ್ರವನ್ನು ನಿರ್ಮಾಣ ಘಾಡಲು ಉದ್ದೇಶಿಸಿದ್ದು, ಸದರೀ ಉಪ ವಿದ್ಯುತ್ ಕೇಂದ್ರದಲ್ಲಿ ಒಂದು 6.3 ಎಂ.ವಿ.ಎ. ಸಾಮರ್ಥ್ಯದ ಪವರ್ ಟ್ರಾನ್ಸ್‌ಫಾರ್ಮರನ್ನು ಸ್ಥಾಪಿಸಲಾಗುವುದು. ಈ ಕಾರ್ಯಕ್ಕೆ ತಗಲುವ ಅಂದಾಜು ವೆಚ್ಚ ಟ್ಯಾಪ್‌ಲೈನು ಸೇರಿದಂತೆ ಸುಮಾರು 97 ಲಕ್ಷ ರೂಪಾಯಿಗಳು. ಸುಮಾರು 15 ಕಿಲೋಮೀಟರು ಉದ್ದದ 66 ಕೆ.ವಿ. ಟ್ಯಾಪ್‌ಲೈನನ್ನು ನಿರ್ಮಾಣ ಮಾಡಲಾಗುವುದು. ಪ್ರಸ್ತುತ ಆರ್ಥಿಕ ವರ್ಷದ (1992–93) ಆಯವ್ಯಯದಲ್ಲಿ ಈ ಕಾರ್ಯಕ್ಕಾಗಿ 25 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಆಗತ್ಯವಿರುವ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದ್ದು, ನಿರ್ಮಾಣ ಕಾರ್ಯವನ್ನು ಸದ್ಯದಲ್ಲೇ ಪ್ರಾರಂಭಿಸಲಾಗುವುದು. ನಿರ್ಮಾಣ ಕಾರ್ಯವನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಮಂಡಳಿಯು ಎಲ್ಲಾ ಪ್ರಯತ್ನಗಳನ್ನು ಮಾಡುವುದು.

ಅಲ್ಲದೆ, ಮಂಡ್ಯ ಜಿಲ್ಲೆಯಲ್ಲಿ ವಿದ್ಯುತ್ ಸರಬರಾಜಿನ ಪರಿಸ್ಥಿತಿಯ ಸುಧಾರಣೆಗಾಗಿ ಟಿ.ಕೆ. ಹಳ್ಳಿಯಲ್ಲಿರುವ 220:66 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರದಿಂದ ಮಂಡ್ಯದಲ್ಲಿರುವ 66:11 ಕೆ.ವಿ. ಉಪ ವಿದ್ಯುತ್ ಕೇಂದ್ರಕ್ಕೆ 66 ಕೆ.ವಿ. ಡಿ.ಸಿ. ವಿದ್ಯುತ್ ಲೈನನ್ನು ನಿರ್ಮಾಣ ಮಾಡಲು ಉದ್ದೇಶಿಸಿದ್ದು, ಪ್ರಸ್ತುತ ಸಾಲಿನ (1992–93)ರ ಆಯವ್ಯಯದಲ್ಲಿ ಈ ಕಾರ್ಯಕ್ಕಾಗಿ 50 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಈ ಲೈನಿನ ನಿರ್ಮಾಣ ಕಾರ್ಯವನ್ನು 1992–94ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಮಂಡಳಿಯು ಎಲ್ಲಾ ಪ್ರಯತ್ನಗಳನ್ನು ಮಾಡುವುದು. ಮಂಡಳಿಯ ಮಂಡ್ಯ ವಿಭಾಗದಲ್ಲಿ ವಿದ್ಯುದ್ದೀಕರಣಕ್ಕೆ ಸಂಬಂಧಿಸಿದಂತೆ ಬೇಕಾಗಿರುವ ವಿತರಣಾ ಟ್ರಾನ್ಸ್‌ಫಾರ್ಮರ್ ಮತ್ತು ವಿದ್ಯುತ್ ತಂತಿಗಳ ಕೊರತೆ ಇರುವ ವಿಷಯ ಮಂಡಳಿಯ ಗಮನಕ್ಕೆ ಬಂದಿದ್ದು, ಈ ವಿಭಾಗಕ್ಕೆ ಬೇಕಾಗಿರುವ ವಿತರಣಾ ಟ್ರಾನ್ಸ್‌ಫಾರ್ಮರ್ ಮತ್ತು ವಿದ್ಯುತ್ ತಂತಿಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಈ ವಿಭಾಗದಲ್ಲಿ ವಿದ್ಯುತ್ ಕಂಬಗಳ ಕೊರತೆ ಇರುವುದಿಲ್ಲ.

(3) ನಗರದಲ್ಲಿ ಎಸ್.ಎಸ್.ಯು.ಐ. ಉಪಾಧ್ಯಕ್ಷರಾದ ಶ್ರೀ ಆಲಬರ್ಟ್ ಹೆನ್ರಿ ಅವರ ಮೇಲೆ ನಡೆದ ಹಲ್ಲೆ

ಶ್ರೀ ರಾಮಲಿಂಗಾ ರೆಡ್ಡಿ:– ಸುಮಾರು ಒಂದು ತಿಂಗಳ ಹಿಂದೆ ಬೆಂಗಳೂರು ನಗರದಲ್ಲಿ ಎಸ್.ಎಸ್.ಯು.ಐ. ಉಪಾಧ್ಯಕ್ಷರಾದ ಶ್ರೀ ಆಲ್ಬರ್ಟ್ ಹೆನ್ರಿರವರ ಮೇಲೆ ಹಲ್ಲೆ ನಡೆದಿದ್ದು ಇವರನ್ನು ಕೊಲ್ಲುವ ಸಂಚು ವಿಫಲವಾಯಿತು. ಈ ಬಗ್ಗೆ ಪೋಲಿಸರು ಪ್ರಯತ್ನ ಪಡುತ್ತಿದ್ದರೂ ಸಹಾ ಸಂಬಂಧಪಟ್ಟವರನ್ನು ಬಂಧಿಸಲು ಇನ್ನೂ ಸಾಧ್ಯವಾಗಿಲ್ಲ. ಇದರ ಜೊತೆಗೆ ಲಕ್ಕಸಂದ್ರ ಭಾಗಗಳಲ್ಲಿ ಇತ್ತೀಚಿನ ದಿನಗಳಲ್ಲಿ ದರೋಡೆ, ಕಳ್ಳತನ, ಹಾಗೂ ಹಲ್ಲೆ ಪ್ರಕರಣಗಳು ಹೆಚ್ಚಾಗುತ್ತಿವೆ. ಆದ್ದರಿಂದ ಈ ಭಾಗಗಳಿಗೆ ಹೆಚ್ಚಿನ ಪೋಲೀಸ್ ಸಿಬ್ಬಂದಿ ಒದಗಿಸಬೇಕು ಹಾಗೂ ಈ ಮೇಲ್ಕಂಡ ಹಲ್ಲೆ ಪ್ರಕರಣವನ್ನು ಸಿ.ಓ.ಡಿ.ಗೆ ಒಪ್ಪಿಸಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಯವರನ್ನು ಕೋರುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ಖಾತೆಗಳ ಸಚಿವರು):– ಸನ್ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ಮಾಡಲಿಚ್ಚಿಸುತ್ತೇನೆ.

ದಿನಾಂಕ: 2-12-1992ರಂದು ಸಾಯಂಕಾಲ ಸುಮಾರು 7-45 ಗಂಟೆಯಲ್ಲಿ 3 ಜನ ಅಪರಿಚಿತ ವ್ಯಕ್ತಿಗಳು ತಮ್ಮ ಮುಖಕ್ಕೆ ಬಟ್ಟೆ ಸುತ್ತಿಕೊಂಡು ಒಂದು ಆಟೋರಿಕ್ಷಾದಲ್ಲಿ ಬಂದವರು ಶ್ರೀ ಆಲ್ಬರ್ಟ್ ಹೆನ್ರಿ, ಎನ್.ಎಸ್.ಯು.ಐ. ಉಪಾಧ್ಯಕ್ಷರನ್ನು ಚಾಕುವಿನಿಂದ ಇರಿದು ಅದೇ ಆಟೋ ರಿಕ್ಷಾದಲ್ಲಿ ಅಲ್ಲಿಂದ ಓಡಿ ಹೋದ ವಿಷಯದ ಬಗ್ಗೆ ದಿನಾಂಕ: 3-12-1992ರ ಬೆಳಗಿನ ಜಾವ 2-30 ಗಂಟೆಗೆ ವಿಲ್ಸನ್ ಗಾರ್ಡನ್ ನಿವಾಸಿ ಹಾಗೂ ಆಲ್ಬರ್ಟ್ ಹೆನ್ರಿಯವರ ನೆರೆಯವರಾದ ಶ್ರೀ ಬಾಲಾಜಿಯವರು ಆಡುಗೋಡಿ ಪೋಲೀಸರಿಗೆ ವಿಷಯ ವರದಿ ಮಾಡಿರುತ್ತಾರೆ. ಆ ಮೇರೆಗೆ ಆಡುಗೋಡಿ ಪೋಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ:431:92, ಕಲಂ 307 ಭಾ.ದಂ.ಸಂ. ಪ್ರಕಾರ ಕೇಸನ್ನು ನೋಂದಾಯಿಸಿಕೊಂಡು ಸಂಬಂಧಪಟ್ಟ ಅಧಿಕಾರಿಗಳನ್ನು ಕೂಡಲೇ ಟಿ.ಬಿ.ಸಾನಿಟೋರಿಯಂ ಆಸ್ಪತ್ರೆಗೆ ಭೇಟಿ ಕೊಟ್ಟು ಆಗಲೇ ಅಲ್ಲಿಗೆ ಸೇರಿಸಿದ ಗಾಯಾಳುವನ್ನು ಕಂಡು ಅವರ ವಿವರವಾದ ಹೇಳಿಕೆಯನ್ನು ವೈದ್ಯಾಧಿಕಾರಿ ಶ್ರೀ ಎ.ಬಿ. ರಂಗಪ್ಪನವರ ಸಮ್ಮುಖದಲ್ಲಿ ಪಡೆದುಕೊಂಡಿರುತ್ತಾರೆ.

ಈ ಮೊದಲೇ ಪೋಲೀಸ್ ಠಾಣೆಗೆ ಶ್ರೀ ಬಾಲಾಜಿಯವರು ಕೊಟ್ಟ ಹೇಳಿಕೆಯಲ್ಲಾಗಲೀ ಅಥವಾ ಪೋಲೀಸ್ ಅಧಿಕಾರಿಗಳಿಗೆ ಗಾಯಾಳು ಆಸ್ಪತ್ರೆಯಲ್ಲಿ ನೀಡಿದ ಹೇಳಿಕೆಯಲ್ಲಾಗಲೀ ಸ್ಪಷ್ಟವಾಗಿ ಅಪರಾಧಿಗಳು ಯಾರು ಎಂಬುದನ್ನು ಹೇಳಿಲ್ಲವಾದರೂ, ಆಲ್ಬರ್ಟ್ ಹೆನ್ರಿಯವರು ಸ್ಥಳೀಯ ನಗರಸಭಾ ಸದಸ್ಯರಾದ ಶ್ರೀ ಚಂದ್ರಪ್ಪನವರ ಕೈವಾಡವಿರಬಹುದ್ದೆಂದು ಶಂಕಿಸಿದ್ದಾರೆ. ಇದಕ್ಕೆ ಹಿನ್ನೆಲೆಯೇನೆಂದರೆ ಶ್ರೀ ಆಲ್ಬರ್ಟ್ ಹೆನ್ರಿಯವರು ಶ್ರೀ ಶಾಮಣ್ಣಗೌಡ ಎಂಬುವರ ಮನೆಯಲ್ಲಿ ಬಾಡಿಗೆಗೆ ವಾಸವಾಗಿದ್ದು ಶ್ರೀ ಹೆನ್ರಿಯವರು ಮನೆ ಖಾಲಿ ಮಾಡಿ ಹೋಗಬೇಕೆಂಬ ವಿವಾದದಲ್ಲಿ ಶ್ರೀ ಚಂದ್ರಪ್ಪನವರು ಹಸ್ತಕ್ಷೇಪ ಮಾಡಿದ್ದು, ಮನೆ ಖಾಲಿ ಮಾಡಬೇಕೆಂದು ಚಂದ್ರಪ್ಪನವರೂ ಸಹ ತಿಳಿಸಿದ್ದ ಹಿನ್ನೆಲೆಯಾಗಿದ್ದು, ಈ ಘಟನೆಯಲ್ಲಿ ಚಂದ್ರಪ್ಪನವರ ಕೈವಾಡವಿರಬಹುದೆಂದು ಶಂಕಿಸಿ ಶ್ರೀ ಹೆನ್ರಿಯವರು ಹೇಳಿಕೆ ನೀಡಿರುತ್ತಾರೆ.

ಹಿಂದಿನ ವಿವಾದಕ್ಕೆ ಸಂಬಂಧಪಟ್ಟಂತೆ ಹಾಗೂ ಈಗ ನಡೆದಿರುವ ಕೃತ್ಯಕ್ಕೆ ಸಂಬಂಧವಾಗಿ ಚಂದ್ರಪ್ಪ ಹಾಗೂ ಅವರ ಜೊತೆಯವರಾದ ಶಂಭುಲಿಂಗ, ರವಿ ಮತ್ತು ವಿವಾದಕ್ಕೆ ಒಳಪಟ್ಟಂತೆ ಮನೆ ಮಾಲೀಕರಾದ ಶಾಮಣ್ಣಗೌಡರವರನ್ನು ಈಗಾಗಲೇ ಪೋಲೀಸಿನವರು ಸುದೀರ್ಘವಾದ ವಿಚಾರಣೆಗೆ ಒಳಪಡಿಸಿದ್ದಾಗ್ಯೂ, ಈ ಘಟನೆಯ ಬಗ್ಗೆ ಯಾವುದೇ ಸುಳಿವು ಸಿಕ್ಕಿರುವುದಿಲ್ಲ. ಈ ಹಿಂದೆ ಹೇಳಿದ ಹಾಗೆ, ಬಾಲಾಜಿಯವರ ದೂರಿನಲ್ಲಾಗಲ್ಲಿ, ತದನಂತರದ ಗಾಯಾಳು ಆಲ್ಬರ್ಟ್ ಹೆನ್ರಿಯವರ ಹೇಳಿಕೆಯಲ್ಲಾಗಲೀ, ಅಪರಾಧಿ ಯಾರು ಎಂಬುದನ್ನು ತಿಳಿಸದೇ ಇರುವುದರಿಂದ ಹಾಗೂ ಘಟನೆಗೆ ಏಕೈಕ ಪ್ರತ್ಯಕ್ಷದರ್ಶಿಯಾಗಿರುವ ಶ್ರೀ ಶಶಿಭೂಷಣರವರು 3 ಜನ ಅಪರಾಧಿಗಳ ಚಹರೆ ಅಥವಾ ಇನ್ನಿತರ ಯಾವುದೇ ಮಹತ್ವವಾದ ಸುಳಿವನ್ನು ತಿಳಿಸುವಲ್ಲಿ ವಿಫಲರಾಗಿದ್ದಾರೆ.

ಈ ಪ್ರಕರಣದಲ್ಲಿ ಸಾಕಷ್ಟು ಮಾಹಿತಿ ದೊರಕದೆ ಪ್ರಕರಣ ಇತ್ಯರ್ಥವಾಗದೆ ಇದ್ದುದರಿಂದ, ಪ್ರಕರಣದ ಮಹತ್ವವನ್ನು ಅರಿತು ಎಸಿಪಿ, ಆಲಸೂರ್‌ಗೇಟ್ ಹಾಗೂ ಒಬ್ಬ ಸಿ.ಪಿ.ಐ. ಮತ್ತು ಪಿಎಸ್‌ಐಗಳನ್ನೊಳಗೊಂಡಂತೆ ಈ ಪ್ರಕರಣವನ್ನು ಶೀಘ್ರವಾಗಿ ಪತ್ತೆ ಹಚ್ಚುವ ಸಲುವಾಗಿ ಒಂದು ವಿಶೇಷ ದಳವನ್ನು ರಚಿಸಲಾಗಿದೆ. ಈ ಪ್ರಕರಣದಲ್ಲಿ ಕೆಲವು ಸಂಶಯಾಸ್ಪದ ವ್ಯಕ್ತಿಗಳ ಬಗ್ಗೆ ಸುಳಿವು ದೊರಕಿದ್ದು, ಸಧ್ಯದಲ್ಲೇ ಸತ್ಯ ಹೊರಬೀಳುವ ಸಾಧ್ಯತೆ ಇದೆ.

ಕಳೆದ ಒಂದೆರಡು ವರ್ಷಗಳಿಂದ ಲಕ್ಕಸಂದ್ರ ಬಡಾವಣೆಯಲ್ಲಿ ಡಕಾಯಿತಿ, ಕೊಲೆ ಮತ್ತು ಸುಲಿಗೆ ಮತ್ತು ಕಳ್ಳತನಗಳು ಹೆಚ್ಚುತ್ತಿವೆ ಎನ್ನುವ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ 1990 ರಿಂದೀಚೆಗೆ ಈ ಭಾಗದಲ್ಲಿ ಯಾವುದೇ ಕೊಲೆ, ದರೋಡೆ ಮತ್ತು ಸುಲಿಗೆ ಪ್ರಕರಣಗಳು ವರದಿಯಾಗಿರುವುದಿಲ್ಲ. ಆದರೂ 1990ರಿಂದೀಚೆಗೆ ವರ್ಷಕ್ಕೆ ಸರಾಸರಿ ನಾಲ್ಕು ಕಳ್ಳತನಗಳ ಪ್ರಕರಣಗಳು ವರದಿಯಾಗಿದ್ದು, ಅವುಗಳಲ್ಲಿ ಕೆಲವು ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ. ಈ

ಭಾಗದಲ್ಲಿ ಹೆಚ್ಚಿನ ಪೋಲೀಸ್ ಸಿಬ್ಬಂದಿಯ ಅವಶ್ಯಕತೆ ಬಗ್ಗೆ ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

(4) ಮಂಡ್ಯ ಜಿಲ್ಲೆಯಲ್ಲಿ ರೇಷ್ಮೆ ಬೆಳೆಯುವ ರೈತರಿಗೆ ಮಾರುಕಟ್ಟೆ ಸೌಲಭ್ಯ.

ಶ್ರೀ ಎಂ. ತಮ್ಮಣ್ಣ:- ಮಾನ್ಯ ಅಧ್ಯಕ್ಷರೇ ಮಂಡ್ಯ ಜಿಲ್ಲೆಯಲ್ಲಿ ರೇಷ್ಮೆ ಬೆಳೆಯು ಬಹು ಪ್ರಾಮುಖ್ಯತೆಯನ್ನು ಪಡೆದಿರುತ್ತದೆ. ಆದರಲ್ಲೂ ಖುಷ್ಕಿ ಪ್ರದೇಶದ ರೈತರು ಹೆಚ್ಚು ಈ ಬೆಳೆಯನ್ನು ಅವಲಂಬಿಸಿದ್ದಾರೆ. ತಾವು ಬೆಳೆದ ರೇಷ್ಮೆಗೂಡುಗಳನ್ನು ಪಕ್ಕದ ಚನ್ನಪಟ್ಟಣ ಮತ್ತು ರಾಮನಗರದ ರೇಷ್ಮೆಗೂಡಿನ ಮಾರುಕಟ್ಟೆಗೆ ಬಿಕರಿ ಮಾಡಲು ತೆಗೆದುಕೊಂಡು ಹೋಗಬೇಕಾದ ಅನಿವಾರ್ಯ ಪರಿಸ್ಥಿತಿ ಇದೆ. ಆದರೆ ಸೂಕ್ತ ಸಾಗಾಣಿಕೆ ವ್ಯವಸ್ಥೆ ಇಲ್ಲದೆ, ರೈತರು ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ. ಮಂಡ್ಯ ನಗರದಲ್ಲಿ ಬೆಂಗಳೂರಿನಿಂದ ಬಂದು ರಾತ್ರಿ ತಂಗುವ ಬಸ್ಸುಗಳನ್ನು ಜಿಲ್ಲೆಯ ಕೊನೆ ಭಾಗಗಳಾದ ಕೌಡ್ಲೆ, ಬಸರಾಳು, ಮೇಲುಕೋಟೆ ಇನ್ನೂ ಮುಂತಾದ ಸ್ಥಳಗಳಲ್ಲಿ ರಾತ್ರಿ ತಂಗಿದ್ದು ಬೆಳಿಗ್ಗೆ ಬಸ್ಸುಗಳು ಹೊರಟರೆ ರೈತರಿಗೆ ತುಂಬಾ ಅನುಕೂಲವಾಗುತ್ತದೆ. ಗ್ರಾಮಾಂತರ ಪ್ರದೇಶದ ಜನರಿಗೆ ಅದರಲ್ಲೂ ವಿಶೇಷವಾಗಿ ರೈತರ ಅನುಕೂಲಕ್ಕಾಗಿ ಅಧಿಕ ಸಂಖ್ಯೆಯಲ್ಲಿ ಬಸ್ಸುಗಳನ್ನು ಆಳವಡಿಸಿ ಸಾರಿಗೆ ಸೌಲಭ್ಯವನ್ನು ದೊರಕಿಸಿಕೊಡಬೇಕೆಂದು ಸಾರಿಗೆ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು), (ಸಾರಿಗೆ ಸಚಿವರ ಪರವಾಗಿ):- ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಮಂಡ್ಯಜಿಲ್ಲೆಯಲ್ಲಿ ಈ ಕೆಳಕಂಡ 3 ರಸ್ತೆ ಮಾರ್ಗಗಳನ್ನು ಮಾತ್ರ ರಾಷ್ಟ್ರೀಕರಣಗೊಳಿಸಿದೆ. ಅವುಗಳು (1) ಬೆಂಗಳೂರು-ಮೈಸೂರು ವಯಾ ರಾಮನಗರ, ಚೆನ್ನಪಟ್ಟಣ, ಮದ್ದೂರು ಮತ್ತು ಮಂಡ್ಯ. (2) ಮೈಸೂರು-ಚನ್ನರಾಯಪಟ್ಟಣ ವಯಾ ಶ್ರೀರಂಗಪಟ್ಟಣ, ಪಾಂಡವಪುರ ಮತ್ತು ಕೆ.ಆರ್.ಪೇಟೆ ಹಾಗೂ (3) ಮೈಸೂರು-ತಿಪಟೂರು ವಯಾ ಶ್ರೀರಂಗಪಟ್ಟಣ, ಪಾಂಡವಪುರ, ನಾಗಮಂಗಲ, ಬೆಳ್ಳೂರು ಮತ್ತು ತುರುವೇಕೆರೆ. ಈ ಮೇಲಿನ ಮಾರ್ಗಗಳನ್ನು ಹೊರತುಪಡಿಸಿ ಮಿಕ್ಕ ಮಾರ್ಗಗಳಲ್ಲಿ ಖಾಸಗೀ ವಾಹನಗಳು ಸಾರಿಗೆ ಸೇವೆಯ ಆಗತ್ಯವನ್ನು ಪೂರೈಸುತ್ತಿದೆ. ಕೌಡ್ಲೆ, ಬಸರಾಳು, ಮೇಲುಕೋಟೆ ಸ್ಥಳಗಳು ರಾಷ್ಟ್ರೀಕರಣ ಆಗದೇ ಇರುವ ಪ್ರದೇಶದಲ್ಲಿ ಇರುತ್ತದೆ. ಮಂಡ್ಯದಿಂದ ಮೇಲ್ಕಂಡ ಪ್ರದೇಶಗಳಿಗೆ ಸಾಕಷ್ಟು ಖಾಸಗೀ ವಾಹನಗಳು ಓಡಾಡುತ್ತಿವೆ. ಹಾಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಬೆಂಗಳೂರಿನಿಂದ-ಮಂಡ್ಯಾಕ್ಕೆ 7 ರಾತ್ರಿ ತಂಗುವ ವಾಹನಗಳನ್ನು ಓಡಿಸುತ್ತಿದೆ. ಮಂಡ್ಯದಲ್ಲಿ ರಾತ್ರಿ ತಂಗುವ ಮೊದಲನೆ ವಾಹನವು ಬೆಂಗಳೂರನ್ನು ರಾತ್ರಿ 7.00 ಗಂಟೆಗೆ ಬಿಟ್ಟು ರಾತ್ರಿ 9.15 ಗಂಟೆಗೆ ಮಂಡ್ಯಾ ತಲುಪುತ್ತದೆ. ಕೊನೆಯ ಬಸ್ಸು ಬೆಂಗಳೂರಿನಿಂದ ರಾತ್ರಿ 10.30ಕ್ಕೆ ಬಿಟ್ಟು ಮಂಡ್ಯಾಕ್ಕೆ 0045ಕ್ಕೆ ಸೇರುತ್ತದೆ. ಎಲ್ಲಾ ರಾತ್ರಿ ತಂಗುವ ಬಸ್ಸುಗಳು ರಾತ್ರಿ 0.9.00ರ ಮೇಲೆ ಮಂಡ್ಯಕ್ಕೆ ಬರುತ್ತವೆ ಹಾಗೂ ಈ ಬಸ್ಸುಗಳು ಮಂಡ್ಯದಿಂದ ಬೆಳಿಗ್ಗೆ 6.30ರ ನಂತರ ಬಿಡುತ್ತವೆ ಬೆಂಗಳೂರಿಗೆ. ನಿಯಮ 15(2)ರ ಮೋಟಾರು ಕಾರ್ಮಿಕರ ಕಾಯ್ದೆ 1961ರ ಅನ್ವಯ ಪ್ರತಿಯೊಬ್ಬ ಚಾಲಕ ನಿರ್ವಾಹಕರಿಗೆ ಒಂದು ದಿನದ ಕರ್ತವ್ಯ ಮುಗಿದು ಮತ್ತೊಂದು ದಿನದ ಕರ್ತವ್ಯ ಆರಂಭವಾಗುವ ಮುನ್ನ 0900 ಗಂಟೆಗಳ ವಿಶ್ರಾಂತಿ ಕೊಡಬೇಕಾಗಿರುತ್ತದೆ.

ಇದರಿಂದಾಗಿ ಹಾಲಿ ಇರುವ ಬಸ್ಸುಗಳನ್ನು ಸಮಯ ಬದಲಾವಣೆ ಮಾಡದೆ ವಿಸ್ತರಿಸಲು ಸಾಧ್ಯವಾಗುವುದಿಲ್ಲ. ಹಾಲಿ ಸಂಚರಣೆಯಲ್ಲಿರುವ ಬಸ್ಸುಗಳ ವೇಳೆಗಳು ಸಾರ್ವಜನಿಕ ಪ್ರಯಾಣಿಕರ ಆಗತ್ಯಗಳನ್ನು ಪೂರೈಸುತ್ತಿದ್ದು ಚೆನ್ನಾಗಿ ಉತ್ತೇಜನಗೊಂಡಿವೆ. ಈ ವೇಳೆಗಳನ್ನು ಬದಲಾಯಿಸಿದಲ್ಲಿ ಹಾಲಿ ಉಪಯೋಗ ಪಡೆಯುತ್ತಿರುವ ಪ್ರಯಾಣಿಕರಿಂದ ದೂರುಗಳಿಗೆ ಆಸ್ಪದವಾಗುತ್ತವೆ. ಆದ್ದರಿಂದ ಈ ಬಸ್ಸುಗಳನ್ನು ವಿಸ್ತರಿಸುವುದು ಸೂಕ್ತವಲ್ಲ. ಈ ಹಳ್ಳಿಗಳಿಂದ